

ಅಗತ್ಯವೂ ಇಲ್ಲ. ಅವರಿಗೆ ಯಾವ ರೀತಿಯ ಕಷ್ಟಗಳು ಎಷ್ಟು ಪ್ರಮಾಣದಲ್ಲಿ ಬಂದಿರಬಹುದೆಂದು ಒಂದೇ ನೋಟದಲ್ಲಿ ಗುರುತಿಸಿ ಬಿಡುತ್ತಾನೆ. ಅಂದರೆ ಒಂದು ನಮೂನಿ ಸ್ಕ್ಯಾನಿಂಗ್ ಮಶೀನ್ ಇದ್ದಂತೆ.

ಎನ್ನ ಪತಿಯು ಒಬ್ಬ ವ್ಯಾಪಾರಸ್ಥನಾಗಿದ್ದು ಅವನ ಅಂಗಡಿಯು ಬಸ್ ನಿಲ್ದಾಣದ ಎದುರಿಗೆ ಇರುವುದರಿಂದ ನೂರಾರು ಊರುಗಳಿಂದ ಬರುವ ನೂರಾರು ವಿಧದ ಜನರನ್ನು ಪ್ರತಿದಿನ, ಪ್ರತಿಕ್ಷಣ ನೋಡುತ್ತಲೇ ಇರುತ್ತಾನೆ. ಅವರ ಬಟ್ಟೆ-ಬರೆ, ನಡೆ- ನುಡಿ, ಮಾತು- ಕತೆ ಇವುಗಳನ್ನೆಲ್ಲ ಅಳೆದು, ತೂಗಿ ಅವರ ಕಷ್ಟ- ಸುಖಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವನ್ನು ಗಳಿಸಿದ್ದಾನೆ. ಬಹಳ ವರ್ಷಗಳಿಂದ ಜನರ ಜೊತೆಗೆ ಸಂಪರ್ಕ- ಸಂವಹನ ನಡೆಸಿರುವುದರಿಂದ ಅನುಭವ ಸಿದ್ಧಿಯಿಂದ ಒಂದು ಅಸಾಧಾರಣ ಕೌಶಲವು ಪ್ರಾಪ್ತಿಯಾಗಿದೆ. ಅವನಿಗೆ ಹೀಗೆ ದೊರಕಿದ ಶಕ್ತಿಯಿಂದ ನಮಗೆ ಅಂದರೆ ಅವನ ಕುಟುಂಬಸ್ಥರಿಗೆ ಒಳಿತಾಗಿದೆಯೋ ಅಥವಾ ತೊಂದರೆಯಾಗಿದೆಯೋ ಎಂದು ಆಲೋಚಿಸಿದರೆ ಅನನುಕೂಲವೇ ಹೆಚ್ಚಾಗಿದೆ ಎಂದು ಹೇಳಬಹುದು. ಯಾಕೆಂದರೆ ದಿನಾಲೂ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಕೊಂಡಿರುತ್ತಾನೆ. ನೆರಳಿರುವ ಮರದಡಿಯಲ್ಲಿ ವಿಶ್ರಮಿಸಿಕೊಳ್ಳುವ ಪಥಿಕರಿಗೇನು ಕೊರತೆ ಎಂಬ ಮಾತಿನಂತೆ ಸಹಾಯ ಮಾಡುವವನೊಬ್ಬನಿದ್ದಾನೆ ಎನ್ನುವ ವಿಷಯ ಗೊತ್ತಿರುವ ಸ್ನೇಹಿತರು, ತಮ್ಮ ಸಮಸ್ಯೆಗಳಿಗೆ ಇವನನ್ನು ಸಂಪರ್ಕಿಸುತ್ತಾರೆ. ಒಂದು ಕೆಲಸ ಮುಗಿಯುವ ಮೊದಲೇ ಇನ್ನೊಂದು ಸಮಸ್ಯೆ ಹಾಜರಾಗಿರುತ್ತದೆ.

ಎಂಪತಿ ಉಳ್ಳ ವ್ಯಕ್ತಿ ಕೇವಲ ಹಣಕಾಸಿನ ಸಹಾಯವಷ್ಟನ್ನೇ ಮಾಡಿದರೆ ಸಾಕಾಗುವುದಿಲ್ಲ. ಅವನು ಯಾರ ಚಪ್ಪಲಿಯಲ್ಲಿ ಕಾಲು ಹಾಕಿರುತ್ತಾನೋ ಅವರ ಆಗಿನ ಸಮಸ್ಯೆಯ ಸ್ವರೂಪ ಎಂಥದೇ ಇದ್ದರೂ ಅದನ್ನು ಬಗೆಹರಿಸಬೇಕಾಗುತ್ತದೆ. ಆಮೇಲೆ ಈ ಚಪ್ಪಲಿಯಲ್ಲಿ ಕಾಲು ತೂರಿಸುವ ಕಷ್ಟ ಏನೆಂದರೆ ಒಮ್ಮೆ ಕಾಲು ತೂರಿಸಿದ ನಂತರ ಗಬಕ್ಕನೆ ತೆಕ್ಕೊಳ್ಳಲು ಬರುವುದಿಲ್ಲ. ಆ ಕಷ್ಟ ಪರಿಹಾರ ಆಗುವವರೆಗೂ ಕಾಲನ್ನು ಅಲ್ಲಿಯೇ ಇಟ್ಟಿರಬೇಕಾಗುತ್ತದೆ. ಕೆಲವು ಸಲ ಎದುರಿಗಿನ ಸಮಸ್ಯೆ ಬಹಳ ಸರಳವೆಂದು ಭಾಸವಾಗಿದ್ದು ಅದನ್ನು ಪರಿಹರಿಸಲು ನಿಂತಾಗ ಅದು ಹಿಮಾಲಯ ಪರ್ವತವಾಗಿಬಿಡುತ್ತದೆ. ಅಂದರೆ ತೂರಿಸಿದ ಕಾಲು ಈ ಮೊದಲೇ ಒಂದು ದೊಡ್ಡ ಮೊಸಳೆಯ ಬಾಯಲ್ಲಿತ್ತು ಮತ್ತು ಅದು ಸಪ್ಪಳವಿಲ್ಲದೇ ಕಾಲನ್ನು ಕೊಂಚ ಕೊಂಚವಾಗಿ ತಿನ್ನುತ್ತಿತ್ತು ಎಂದು ಆಮೇಲೆ ಗೊತ್ತಾಗುತ್ತದೆ. ಈ ಸಮಸ್ಯೆ ಎನ್ನುವ ಮೊಸಳೆಗೆ ತನ್ನ ಬಾಯಲ್ಲಿರುವ ಕಾಲು ಬದಲಾದರೂ ಏನೂ ತೊಂದರೆಯಿರುವುದಿಲ್ಲ, ಅದಕ್ಕೆ ತನ್ನ ಬಾಯೊಳಗಿನ ಹಲ್ಲು ಖಾಲಿ ಕೂರುವಂತಾಗದೇ ಏನನ್ನಾದರೂ ಬಿಸಿ ರಕ್ತದೊಂದಿಗೆ ಚಪ್ಪರಿಸಲು ಸಿಕ್ಕಿದರೆ ಸಾಕು. ಹೀಗಾಗಿ ಈ ಎಂಪತಿಯುಳ್ಳ ಎನ್ನ ಪತಿ ಕಂಡಕಂಡವರ ಸಮಸ್ಯೆ ಮೊಸಳೆಗೆ ತನ್ನ ಕಾಲನ್ನು ಬದಲಿ ವ್ಯವಸ್ಥೆಯಂತೆ ಎರವಲು ಕೊಟ್ಟುಕೊಳ್ಳುತ್ತಾನೆ. ಒಮ್ಮೊಮ್ಮೆ ಏಕಕಾಲಕ್ಕೆ ಎರಡು ಮೂರು ಕಡೆಯಲ್ಲಿ ಸಿಕ್ಕಿಕೊಂಡಿರುತ್ತಾನೆ. ಒಂದ ಕಡೆ ಎಡಗಾಲನ್ನು ಒಂದು ಕಡೆ ಬಲಗಾಲನ್ನು ಹಾಗೂ ಮೂರನೇ ಕಡೆ ಕಾಲಿನ ಬದಲಿಗೆ ಕೈಯನ್ನು ಎರವಲು ಕೊಟ್ಟಿರುವ ಕಾರಣಕ್ಕಾಗಿ ಮನೆಗೆ ಬರಲು ಕಾಲಿಲ್ಲದೇ ಒದ್ದಾಟವಾಗುತ್ತದೆ.

ಇಂತಹ ಪರೋಪಕಾರ ಬುದ್ಧಿ ನಮ್ಮ ಪತಿರಾಯರಿಗೆ ಬಂದಿದ್ದಾದರೂ ಎಲ್ಲಿಂದ ಎಂದು ತಿಳಿದುಕೊಳ್ಳುವ ಹಂಬಲ ಮೂಡಿದಾಗ ಒಂದು ಸಂಶೋಧನಾತ್ಮಕ ಅಧ್ಯಯನವನ್ನು ಕೈಗೊಳ್ಳಲಾಯಿತು. ಆಗ ತಿಳಿದು ಬಂದ ವಿಚಾರವೆಂದರೆ ಇವನ ತಾಯಿಯ ಅಕ್ಕ ಅಂದರೆ